(ಇಂದು ದಿನಾಂಕ:06-08-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ: ಶ್ರೀ ಎಚ್ ವಿ ಅರ್ಜಿದಾರರ ಪರ ವಕೀಲರಿಂದ :-**

ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.1 | ಪ್ರಥಮ ವರ್ತಮಾನ ವರದಿಯ ದೃಢಿಕೃತ ನಕಲು |
| ನಿ.ಪಿ.2 | ದೂರಿನ ಧೃಡಿಕೃತ ನಕಲು |
| ನಿ.ಪಿ.3 | ಅಂತಿಮ ವರದಿಯ ಧೃಡಿಕೃತ ನಕಲು |
| ನಿ.ಪಿ.4 | ಗಾಯದ ಪ್ರಮಾಣ ಪತ್ರದ ಧೃಡಿಕೃತ ನಕಲು |
| ನಿ.ಪಿ.5 | ವಾಹನ ತಪಾಸಣ ವರದಿಯ ಧೃಡಿಕೃತ ನಕಲು |
| ನಿ.ಪಿ.6 | ಹೆಚ್ಚುವರಿ ಹೇಳಿಕೆಗಳ ಧೃಡಿಕೃತ ನಕಲುಗಳು |
| ನಿ.ಪಿ.7 | ಅಂಗನ್ಯೂನ್ಯತೆ ಪ್ರಮಾಣ ಪತ್ರ |
| ನಿ.ಪಿ.8 | ಆಸ್ಪತ್ರೆಯ ಬಿಡುಗಡೆ ಪತ್ರ |
| ನಿ.ಪಿ.9 | ಒಟ್ಟು 40 ಆಸ್ಪತ್ರೆಯ ಬಿಲ್ಲುಗಳು |
| ನಿ.ಪಿ.10 | ಒಟ್ಟು 22 ವೈದ್ಯರ ಸಲಹಾ ಚೀಟಿಗಳು |
| ನಿ.ಪಿ.11 | ಒಂದು ಎಕ್ಸ್ ರೇ |

**ಪಾಟೀ ಸವಾಲುಃ ಎದುರುದಾರ ನಂ.3 ರವರ ಪರ ಶ್ರೀ ಆರ್ ಜೆ ವಕೀಲರಿಂದ.**

1. ಅಪಘಾತದ ದಿನ ಮುದಗಲ್ಲನಿಂದ 7 ರಾಗಿ ಕ್ಯಾಂಪಿಗೆ ಮೋ.ಸೈ. ಮೇಲೆ ನಾನು, ಸಿದ್ದಪ್ಪ, ರಾಘವೇಂದ್ರ ಮೂರು ಜನ ಬರುತ್ತಿದ್ದೆವು. ಮೋ.ಸೈ. ಸಂಖ್ಯೆ ನನಗೆ ನೆನಪಿಲ್ಲ. ಮುದಗಲ್ಲ-ಸಿಂಧನೂರು ರಸ್ತೆ ರಾಜ್ಯ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಯಲ್ಲಿ ವಾಹನಗಳು ಹಾರ್ನ್ ಮಾಡುತ್ತಾ ಬರುವುದು ಹೋಗುವುದು ಮಾಡುತ್ತವೆ ಎಂದರೆ ಸರಿ. ಲಾರಿ ಚಾಲಕ ಅತೀವೇಗ ಮತ್ತು

ಅಲಕ್ಷತನದಿಂದ ಬಂದು ನಮ್ಮ ಮೋ.ಸೈ.ಗೆ ಬಂದು ಡಿಕ್ಕಿಪಡಿಸಿದ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವೇ ಮೋ.ಸೈ. ಮೇಲೆ ಮೂರು ಜನ ಹೋಗುತ್ತಿದ್ದು, ನಿಯಂತ್ರಣ ತಪ್ಪಿ ನಮ್ಮ ಅಲಕ್ಷತನದಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಮ್ಮ ತಪ್ಪಿನಿಂದ ಅಪಘಾತವಾಗಿರುತ್ತದೆ, ಲಾರಿ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮೋ.ಸೈ. ನ್ನು ನಾನೇ ನಡೆಸುತ್ತಿದ್ದೆ ಎಂದರೆ ಸರಿ. ನನಗೆ ವಾಹನ ಚಾಲನಾ ಪರವಾನಿಗೆ ಇಲ್ಲ ಎಂದರೆ ಸರಿಯಲ್ಲ. ದೋ.ಪ. ವನ್ನು ಲಾರಿ ಮತ್ತು ಮೋ.ಸೈ. ಚಾಲಕ ಮತ್ತು ಅದರ ಮಾಲೀಕ ಆರೋಪಿ ನಂ.1 ರಿಂದ 3 ರವರ ಮೇಲೆ ಸಲ್ಲಿಸಿರುತ್ತಾರೆ ಎಂದರೆ, ಲಾರಿ ಮೇಲೆ ಸಲ್ಲಿಸಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ.

2. ಅಪಘಾತದ ನಂತರ ನನ್ನ ಬಲಗಾಲಿಗೆ ತೀವ್ರ ಸ್ವರೂಪದ ಗಾಯವಾಗಿ ನನ್ನ ಬಲಗಾಲು ಕಟ್ ಮಾಡಿರುತ್ತಾರೆ. ಅಪಘಾತದ ನಂತರ ಸಿಂಧನೂರು ಸರ್ಕಾರಿ ಆಸ್ಪತ್ರೆ, ರಾಯಚೂರು ರಿಮ್ಸ್, ಬಾಲಂಕು ಮತ್ತು ಗಂಗಾವತಿಯ ಕೃಷ್ಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ರಾಯಚೂರಿನ ಬಾಲಂಕು ಆಸ್ಪತ್ರೆಯಲ್ಲಿ ಮಾತ್ರ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಬಾಲಂಕು ಆಸ್ಪತ್ರೆಯಲ್ಲಿ ನನಗೆ ಚಿಕಿತ್ಸೆ ಕೊಟ್ಟ ವೈದ್ಯರ ಹೆಸರು ನನಗೆ ಹೇಳಲು ಬರುವುದಿಲ್ಲ. ಬಾಲಂಕು ಆಸ್ಪತ್ರೆಯಲ್ಲಿ ನಾನು ಒಂದು ವಾರ ಇದ್ದೆ ಆದರೆ ದಿನಾಂಕ ನನಗೆ ನೆನಪಿಲ್ಲ. ಬಾಲಂಕು ಆಸ್ಪತ್ರೆಯಲ್ಲಿ ನಾನು 5 ದಿನ ಮಾತ್ರ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಶಸ್ತ್ರ ಚಿಕಿತ್ಸೆಗಾಗಿ 4-5 ಲಕ್ಷ ಖರ್ಚಾಗಿರುತ್ತದೆ. ನನ್ನ ಶಸ್ತ್ರ ಚಿಕಿತ್ಸೆಗಾಗಿ 4-5 ಲಕ್ಷ ಖರ್ಚಾಗಿರುತ್ತದೆ ಅಂತಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಆಸ್ಪತ್ರೆಯ ಬಿಲ್ಲುಗಳು ಸೃಷ್ಟಿಸಿ ಸಲ್ಲಿಸಿರುತ್ತೇನೆ ಮತ್ತು ಅವುಗಳಿಗೆ ಯಾವುದೇ ವೈದ್ಯರ ಸಲಹಾ ಚೀಟಿಗಳು ಇರುವುದಿಲ್ಲ ಎಂದರೆ ಸರಿಯಲ್ಲ.

3. ಬಾಲಂಕು ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದು ಸಂಪೂರ್ಣ ಗುಣಮುಖವಾದ ನಂತರ ನನ್ನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿ. ಆದರೆ ಮುಂದುವರೆದ ಚಿಕಿತ್ಸೆಗಾಗಿ ವೈದ್ಯರು ನನಗೆ ಸಲಹೆ ನೀಡಿರುತ್ತಾರೆ. ನನಗೆ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ ಎಂದರೆ

ಸರಿಯಲ್ಲ. ಬಾಲಂಕು ಆಸ್ಪತ್ರೆಯಲ್ಲಿ ನಾನು ಆರೋಗ್ಯವಾಗಿ ಇದ್ದ ಕಾರಣ ಅಂಗನ್ಯೂನ್ಯತೆ ಕೊಟ್ಟಿರುವುದಿಲ್ಲ ಎಂದರೆ ಸರಿ. ಹೆಚ್ಚಿನ ಪರಿಹಾರ ಪಡೆಯಲು ನಾನು ಗಂಗಾವತಿ ಆಸ್ಪತ್ರೆಯಲ್ಲಿ ವೈದ್ಯರ ಹತ್ತಿರ ಬರೆಯಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ.

4. ಅಪಘಾತವಾದಾಗ ನನ್ನ ವಯಸ್ಸು 27 ವರ್ಷ ಇತ್ತು. ಆಧಾರ ಕಾರ್ಡ್ ಪ್ರಕಾರ ನನಗೆ 30 ವರ್ಷ ಇತ್ತು ಎಂದರೆ ಸರಿಯಲ್ಲ. ನಾನು ಮೊದಲು ಮೇಷನ್ ಕೆಲಸ ಮಾಡಿ ತಿಂಗಳಿಗೆ 30 ಸಾವಿರ ಸಂಪಾದಿಸುತ್ತಿದ್ದೆ ಎಂದರೆ ಸರಿ. ನಾನು ತಿಂಗಳಿಗೆ ರೂ.30 ಸಾವಿರ ಗಳಿಸುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರಪಡಿಸಿಲ್ಲ ಎಂದರೆ ಸರಿ. ನಾನು ನಿಂತು ಕೆಲಸ ಮಾಡಬೇಕಾಗಿದ್ದರಿಂದ ಈಗ ನನಗೆ ಯಾವುದೇ ಕೆಲಸ ಮಾಡಲು ಬರುವುದಿಲ್ಲ. ಪರಿಹಾರ ಪಡೆಯಲು ನಾನು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು